**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.117/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರೇಮಾಬಾಯಿ |
| ತಂದೆಯ/ಗಂಡನ ಹೆಸರು | : | ಕೃಷ್ಣನಾಯ್ಕು |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಕೂಲಿ |
| ವಾಸ ಸ್ಥಳ | : | ಮೂಸೆನಾಳ ಗ್ರಾಮ, ಹೊನ್ನಾಳಿ. |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 10-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-12 ನನ್ನ ಗಂಡನ ೨ನೇ ಹೆಂಡತಿ. ಮಂಜುಳಾ ಕೋಂ ಕಮ್ಮಾನಾಯ್ಕು ರವರ ಪರಿಚಯ ನನಗೆ ಇಲ್ಲ. ಚಾಸಾ-4 ನನ್ನ ಮಾವ, ಆರೋಪಿ-1 ನನ್ನ ಗಂಡನ ಮೂರನೇ ಹೆಂಡತಿ. ಆರೋಪಿ-3 ರವರು ಒಂದನೇ ಆರೋಪಿರವರ ಸಹೋದರ. ಆರೋಪಿ-4 ಒಂದನೇ ಆರೋಪಿಯ ತಂದೆ. 5-ಆರೋಪಿಯು 1-ಆರೋಪಿಯ ತಾಯಿ. ನನ್ನ ಗಂಡ ಮೃತ ಕೃಷ್ಣನಾಯ್ಕು ಜೀವಿತವಾಗಿದ್ದಾಗ ಮೆಕ್ಕೆಜೋಳ ವ್ಯಾಪಾರ ಮಾಡಿಕೊಂಡಿದ್ದರು. ಕೃಷ್ಣನಾಯಕ ರವರು 8 ವರ್ಷಗಳ ಹಿಂದೆ ನೇಣುಹಾಕಿಕೊಂಡು ತಿರಿಕೊಂಡರು. ನನ್ನ ಗಂಡ ನೇಣು ಹಾಕಿಕೊಂಡು ಸಾಯಲು ಸಂಗೀತಾ ಮತ್ತು ಅವರ ಸಹೋದರ, ತಂದೆ, ತಾಯಿ ಕಾರಣ ಕರ್ತರಾಗಿರುತ್ತಾರೆ.

2. ಸಮಯ 5.00 ಗಂಟೆಯಾಗಿರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.